# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 359 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 03-02-2021 |
| ಉತ್ತರಿಸುವ ಮಾನ್ಯ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಒಟ್ಟು ಎಷ್ಟು ರೈತರು ಕೃಷಿ ಸಂಬಂಧಿತ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಂಡು ಜೀವ ಕಳೆದು ಕೊಂಡಿರುತ್ತಾರೆ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ವಿಮೆ ಕಂತು ಪಾವತಿಸಿದರೂ ಸಹ ತಾವು ಬೆಳೆದ ಬೆಳೆಯು ನಾಶವಾಗಿ ಸರ್ಕಾರದಿಂದ ಬರತಕ್ಕಂತಹ ವಿಮೆಗಾಗಿ ಅರ್ಜಿ ಸಲ್ಲಿಸಿದರೂ ಸಹ ಹಲವು ರೈತರಿಗೆ ವಿಮೆ ಪರಿಹಾರ ದೊರಕದಿರುವ ಕುರಿತು ಮಾನ್ಯ ಉಚ್ಛ ನ್ಯಾಯಾಲಯದಿಂದ ಯಾವುದಾದರೂ ಸೂಚನೆಗಳನ್ನೂ ಸರ್ಕಾರಕ್ಕೆ ನೀಡಲಾಗಿದೆಯೇ; ನೀಡಿದ್ದಲ್ಲಿ, ವಿವರ ಹಾಗೂ ಈ ಕುರಿತು ಸರ್ಕಾರದ ಕ್ರಮವೇನು; | ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, 2016-17ನೇ ಸಾಲಿನ ಮುಂಗಾರು ಹಂಗಾಮಿನಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಸಂರಕ್ಷಣೆ ತಂತ್ರಾಂಶದ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಫಸಲ್ ಬೀಮಾ ಯೋಜನೆಯನ್ನು ವರ್ಷದಿಂದ ವರ್ಷಕ್ಕೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಯೋಜನೆಯು ಅತ್ಯಂತ ವೈಜ್ಞಾನಿಕವಾಗಿ ಹೋಬಳಿ/ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಕೃಷಿ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ತೋಟಗಾರಿಕೆಯವರು ಕೈಗೊಳ್ಳುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿಯು ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ ಕೊರತೆಗೆ ಅನುಗುಣವಾಗಿ ಹೋಬಳಿ/ಗ್ರಾಮ ಪಂಚಾಯತಿಯ ವಿಮಾ ಘಟಕಗಳಲ್ಲಿ ಬೆಳೆ ವಿಮೆ ಮಾಡಿಸಿದ ಅರ್ಹ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. ಅನುಷ್ಠಾನ ವಿಮಾ ಸಂಸ್ಥೆಯವರು ಬೆಳೆ ವಿಮೆ ಪರಿಹಾರ ಮೊತ್ತವನ್ನು ಅರ್ಹ |

| | | |
|---|---|---|
| | | ಫಲಾನುಭವಿಗಳ ಖಾತೆಗೆ ಆಧಾರ್ ಮತ್ತು NEFT ಮುಖಾಂತರ ಇತ್ಯರ್ಥಪಡಿಸಿರುತ್ತಾರೆ.<br><br>ಸದರಿ ಯೋಜನೆಯಡಿ 2016-17ನೇ ಸಾಲಿನಿಂದ 2017-18 ರವರೆಗೆ ಕೆಲವು ಅರ್ಜಿಗಳಲ್ಲಿ ರೈತ ಫಲಾನುಭವಿಗಳ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ ಕಾರಣ/ Account reached maximum Credit limit set on account/ A/c Blocked or Frozen/ Inactive Aadhaar , ರೈತರ ಬ್ಯಾಂಕ್ ಸೇವಾ ಖಾತೆ, IFSC code ಹಾಗೂ ಆಧಾರ್ ಸಂಖ್ಯೆಗಳು ತಪ್ಪು/ಲಭ್ಯವಿರುವುದಿಲ್ಲ (ವಿಶೇಷವಾಗಿ CSC ಕೇಂದ್ರಗಳು) ಹಾಗೂ ಆಧಾರ್ ಸಂಖ್ಯೆಗಳು ಲಭ್ಯವಿದ್ದರೂ ಕೂಡ ವ್ಯಾಲಿಡೇಟ್ ಆಗಿರುವುದಿಲ್ಲದ ಕಾರಣ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲು ಬಾಕಿ ಉಳಿದಿರುತ್ತದೆ.<br><br>ಸದರಿ ಮೊತ್ತವನ್ನು ವಿಮಾ ಸಂಸ್ಥೆಗಳು ಕೃಷಿ ಆಯುಕ್ತರ ಹೆಸರಿನಲ್ಲಿರುವ ESCROW ಖಾತೆಗೆ ವರ್ಗಾಯಿಸಿರುತ್ತಾರೆ. ಸದರಿ ಪಟ್ಟಿಯಲ್ಲಿರುವ ಫಲಾನುಭವಿಗಳ ಸರಿಯಾದ ಬ್ಯಾಂಕ್ ಖಾತೆ ಮತ್ತು ಆಧಾರ್ ಸಂಖ್ಯೆ ವಿವರವನ್ನು ಜಿಲ್ಲೆಗಳಿಂದ ಸಂಗ್ರಹಿಸಿ ರೈತರ ಖಾತೆಗೆ ನೇರವಾಗಿ ಜಮೆ ಮಾಡುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br><br>ಯಾದಗಿರಿ ಜಿಲ್ಲೆಯ ಶಹಾಪುರ್ ತಾಲ್ಲೂಕಿಗೆ ಸಂಬಂಧಿಸಿದಂತೆ, ಉಚ್ಛ ನ್ಯಾಯಾಲಯವು ವಿಮಾ ಸಂಸ್ಥೆಯವರು ESCROW ಖಾತೆಗೆ ಜಮಾ ಮಾಡಿರುವ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲು ಸೂಚಿಸಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ESCROW ಖಾತೆಯಲ್ಲಿ ಉಳಿದಿರುವ ಪರಿಹಾರ ಮೊತ್ತವನ್ನು ರೈತರ ಖಾತೆಗೆ ನೇರವಾಗಿ ಜಮೆ ಮಾಡಲಾಗಿರುತ್ತದೆ. |
| ಇ) | ಅನ್ನದಾತರಿಗೆ ಸಹಾಯ ಮಾಡುವ ಉದ್ದೇಶದಿಂದ ಜಾರಿಗೆ ಬಂದಿರುವ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಸರ್ಕಾರದ ವೈಫಲ್ಯಕ್ಕೆ ಕಾರಣಗಳೇನು; ಮತ್ತು ಸರ್ಕಾರದ ಮುಂದಿನ ಕ್ರಮವೇನು? (ವಿವರ ನೀಡುವುದು) | ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಸಂರಕ್ಷಣೆ ತಂತ್ರಾಂಶದ ಮುಖಾಂತರ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>2016-17ನೇ ಸಾಲಿನಿಂದ 2017-18ನೇ ಸಾಲಿನವರೆಗೆ ಹಾಗೂ 2018-19 ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿಯು ನಿಗಧಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದರೆ, ಇಳುವರಿಯ |

| | | |
|---|---|---|
| | | ಕೊರತೆಗನುಗುಣವಾಗಿ ಬೆಳೆ ವಿಮೆ ಪರಿಹಾರ ಲೆಕ್ಕ ಹಾಕಲಾಗುತ್ತಿತ್ತು.<br><br>2018 ಮುಂಗಾರು ಹಂಗಾಮಿನಿಂದ ಬೆಳೆ ನಷ್ಟ ಹೊಂದಿದ ನೈಜ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ದೊರಕಿಸುವ ಸಲುವಾಗಿ ಜಿ.ಪಿ.ಎಸ್ ಆಧಾರಿತ ಬೆಳೆ ಸಮೀಕ್ಷೆ ದತ್ತಾಂಶ ಬಳಸಿ, ಸಂರಕ್ಷಣೆ ತಂತ್ರಾಂಶದಲ್ಲಿ ಮೊಬೈಲ್ ಆ್ಯಪ್ ಮುಖಾಂತರ ಕೈಗೊಳ್ಳುವ ಬೆಳೆ ಕಟಾವು ಪ್ರಯೋಗಗಳ ವರದಿಯಂತೆ ಪರಿಷ್ಕೃತ PMFBY ಮಾರ್ಗಸೂಚಿಯನ್ವಯ ಬೆಳೆ ವಿಮೆ ಪರಿಹಾರ ಲೆಕ್ಕ ಹಾಕಲಾಗುತ್ತದೆ.<br><br>2016-17 ನೇ ಸಾಲಿನಿಂದ 2018-19ನೇ ಸಾಲಿನವರೆಗೆ ಅನುಷ್ಠಾನ ವಿಮಾ ಸಂಸ್ಥೆಯವರು ಇತ್ಯರ್ಥಪಡಿಸುತ್ತಿದ್ದ ಬೆಳೆ ವಿಮೆ ಪರಿಹಾರ ಮೊತ್ತವು ಸಂರಕ್ಷಣೆ ತಂತ್ರಾಂಶದಿಂದ ನಿಯಂತ್ರಿತವಾಗದೆ ನೇರವಾಗಿ ವಿಮಾ ಸಂಸ್ಥೆಯಿಂದ ಅರ್ಹ ಫಲಾನುಭವಿಗಳ ಖಾತೆಗೆ ಇತ್ಯರ್ಥಪಡಿಸಲಾಗುತ್ತಿತ್ತು. ಆದ್ದರಿಂದ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಿದ ವಿವರದ ಮಾಹಿತಿಯಲ್ಲಿ ಪಾರದರ್ಶಕತೆ ಮತ್ತು ನೈಜ ಸಮಯದ ಪಾವತಿಯ ಸ್ಥಿತಿಯು ದೊರಕುತ್ತಿರುವುದಿಲ್ಲ. ಆದಕಾರಣ 2019-20ನೇ ಸಾಲಿನಲ್ಲಿ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯವರಿಂದ ನೇರವಾಗಿ ರೈತರ ಖಾತೆಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರ ಇತ್ಯರ್ಥಪಡಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br><br>ಸದರಿ ಯೋಜನೆಯಡಿ 2016-17ನೇ ಸಾಲಿನಿಂದ 2019-20 ರವರೆಗೆ ವಿಮೆ ಸಂಸ್ಥೆಯವರಿಂದ ಒಟ್ಟು ರೂ.5538.29 ಕೋಟಿಗಳ ಬೆಳೆ ವಿಮಾ ಪರಿಹಾರ ಮೊತ್ತವನ್ನು 40.56 ಲಕ್ಷ ರೈತರಿಗೆ ಇತ್ಯರ್ಥಪಡಿಸಲಾಗಿರುತ್ತದೆ.<br><br>ಈ ಯೋಜನೆ ಕುರಿತು ರೈತರಿಗೆ ಮಾಹಿತಿ ನೀಡಿ ಪ್ರೋತ್ಸಾಹಿಸಲು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡುವ ಮುಖೇನ, ಭಿತ್ತಿಪತ್ರಗಳು ಮತ್ತು ಕರಪತ್ರಗಳ ಮೂಲಕ ಮತ್ತು ಎಲ್ಲಾ ತಾಲ್ಲೂಕು, ಹೋಬಳಿ ಮತ್ತು ಗ್ರಾಮಪಂಚಾಯಿತಿಗಳಲ್ಲಿ ನಡೆಸಲಾಗುವ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ, ತರಬೇತಿಗಳು, ಸಮೂಹ ಮಾಧ್ಯಮಗಳ ಮೂಲಕ, ಜನಸ್ಪಂದನ ಮತ್ತು ಗ್ರಾಮಸಭೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ವಿಮಾ ಸಂಸ್ಥೆಗಳಿಂದಲೂ ಸಹ ಸಮೂಹ ಮಾಧ್ಯಮಗಳ |

| | | |
|---|---|---|
| | | ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗಿದೆ.<br><br>ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜ್ಯ, ಜಿಲ್ಲಾ ಮಟ್ಟಗಳಲ್ಲಿಯೂ ಸಹಾ ಎಲ್ಲಾ ಹಂಗಾಮಿನ ಪ್ರಾರಂಭದಲ್ಲಿ ಬೆಳೆ ವಿಮೆ ಯೋಜನೆಯ ಪರಿಚಯ ಮತ್ತು ನೋಂದಣಿ ಕುರಿತು ಮಾಹಿತಿಯನ್ನು ನೀಡಲಾಗುತ್ತಿದೆ.<br><br>ಸರ್ಕಾರವು ಈ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ರೀತಿಯಾಗಿ ಬೆಳೆ ವಿಮೆ ಪದ್ಧತಿಯನ್ನು ದಿನದಿಂದ ದಿನಕ್ಕೆ ವೈಜ್ಞಾನಿಕವಾಗಿ ಉನ್ನತೀಕರಣ ಮಾಡುತ್ತಿದ್ದು, ನಿರೀಕ್ಷಿತ ಮಟ್ಟ ತಲುಪುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ. |

**ಸಂಖ್ಯೆ:- ಕೃಇ/15/ಕೃಕೈಉ/2021**

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

## LCQ-359
## 2015–16 ಮತ್ತು 2016–17ನೇ ಸಾಲಿನ ರೈತರ ಆತ್ಮಹತ್ಯೆ ವಿವರ
### ಅನುಬಂಧ

| ಕ್ರ.ಸಂ. | ಜಿಲ್ಲೆ | 2015–16 | | | | 2016–17 | | | |
|---|---|---|---|---|---|---|---|---|---|
| | | ವರದಿಯಾದ ಪ್ರಕರಣಗಳು | ತಿರಸ್ಕೃತಗೊಂಡ ಪ್ರಕರಣಗಳು | ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ಪ್ರಕರಣಗಳು | ಪರಿಹಾರ ವಿತರಿಸಿರುವ ಅರ್ಹ ಪ್ರಕರಣಗಳು | ವರದಿಯಾದ ಪ್ರಕರಣಗಳು | ತಿರಸ್ಕೃತಗೊಂಡ ಪ್ರಕರಣಗಳು | ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ಪ್ರಕರಣಗಳು | ಪರಿಹಾರ ವಿತರಿಸಿರುವ ಅರ್ಹ ಪ್ರಕರಣಗಳು |
| 1 | ಬಾಗಲಕೋಟೆ | 20 | 4 | 16 | 16 | 24 | 0 | 24 | 24 |
| 2 | ಬಳ್ಳಾರಿ | 28 | 8 | 20 | 20 | 26 | 4 | 22 | 22 |
| 3 | ಬೆಂ. ಗ್ರಾಮಾಂತರ | 9 | 4 | 5 | 5 | 2 | 0 | 2 | 2 |
| 4 | ಬೆಂ. ನಗರ | 1 | 0 | 1 | 1 | 0 | 0 | 0 | 0 |
| 5 | ಬೆಳಗಾವಿ | 106 | 21 | 85 | 85 | 60 | 5 | 55 | 55 |
| 6 | ಬೀದರ್ | 65 | 8 | 57 | 57 | 64 | 11 | 53 | 53 |
| 7 | ಚಾಮರಾಜನಗರ | 8 | 1 | 7 | 7 | 6 | 2 | 4 | 4 |
| 8 | ಚಿಕ್ಕಬಳ್ಳಾಪುರ | 21 | 12 | 9 | 9 | 10 | 4 | 6 | 6 |
| 9 | ಚಿಕ್ಕಮಗಳೂರು | 79 | 20 | 59 | 59 | 91 | 30 | 61 | 61 |
| 10 | ಚಿತ್ರದುರ್ಗ | 73 | 53 | 20 | 20 | 50 | 32 | 18 | 18 |
| 11 | ದಕ್ಷಿಣ ಕನ್ನಡ | 10 | 10 | 0 | 0 | 3 | 2 | 1 | 1 |
| 12 | ದಾವಣಗೆರೆ | 52 | 24 | 28 | 28 | 52 | 15 | 37 | 37 |
| 13 | ಧಾರವಾಡ | 69 | 18 | 51 | 51 | 69 | 15 | 54 | 54 |
| 14 | ಗದಗ | 46 | 20 | 26 | 26 | 30 | 16 | 14 | 14 |
| 15 | ಹಾಸನ | 92 | 20 | 72 | 72 | 99 | 21 | 78 | 78 |
| 16 | ಹಾವೇರಿ | 113 | 38 | 75 | 75 | 109 | 19 | 90 | 90 |
| 17 | ಕಲಬುರಗಿ | 77 | 26 | 51 | 51 | 62 | 15 | 47 | 47 |
| 18 | ಕೊಡಗು | 9 | 3 | 6 | 6 | 10 | 5 | 5 | 5 |
| 19 | ಕೋಲಾರ | 11 | 0 | 11 | 11 | 6 | 0 | 6 | 6 |
| 20 | ಕೊಪ್ಪಳ | 38 | 14 | 24 | 24 | 13 | 4 | 9 | 9 |
| 21 | ಮಂಡ್ಯ | 124 | 30 | 94 | 94 | 76 | 4 | 72 | 72 |
| 22 | ಮೈಸೂರು | 92 | 15 | 77 | 77 | 89 | 17 | 72 | 72 |
| 23 | ರಾಯಚೂರು | 81 | 37 | 44 | 44 | 38 | 3 | 35 | 35 |
| 24 | ರಾಮನಗರ | 36 | 5 | 31 | 31 | 13 | 3 | 10 | 10 |
| 25 | ಶಿವಮೊಗ್ಗ | 57 | 18 | 39 | 39 | 42 | 10 | 32 | 32 |
| 26 | ತುಮಕೂರು | 78 | 24 | 54 | 54 | 68 | 17 | 51 | 51 |
| 27 | ಉಡುಪಿ | 10 | 2 | 8 | 8 | 1 | 1 | 0 | 0 |
| 28 | ಉ.ಕನ್ನಡ | 12 | 3 | 9 | 9 | 10 | 0 | 10 | 10 |
| 29 | ವಿಜಯಪುರ | 47 | 13 | 34 | 34 | 26 | 6 | 20 | 20 |
| 30 | ಯಾದಗಿರಿ | 61 | 12 | 49 | 49 | 54 | 10 | 44 | 44 |
| | ಒಟ್ಟು | 1525 | 463 | 1062 | 1062 | 1203 | 271 | 932 | 932 |

**LCQ:359**

**2017-18 ಮತ್ತು 2018-19ನೇ ಸಾಲಿನ ರೈತರ ಆತ್ಮಹತ್ಯೆ ವಿವರ**

| ಕ್ರ.ಸಂ. | ಜಿಲ್ಲೆ | 2017-18 | | | | 2018-19 | | | |
|---|---|---|---|---|---|---|---|---|---|
| | | ವರದಿಯಾದ ಪ್ರಕರಣಗಳು | ತಿರಸ್ಕೃತಗೊಂಡ ಪ್ರಕರಣಗಳು | ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ಪ್ರಕರಣಗಳು | ಪರಿಹಾರ ವಿತರಿಸಿರುವ ಅರ್ಹ ಪ್ರಕರಣಗಳು | ವರದಿಯಾದ ಪ್ರಕರಣಗಳು | ತಿರಸ್ಕೃತಗೊಂಡ ಪ್ರಕರಣಗಳು | ಸಮಿತಿಯು ಅರ್ಹ ಪ್ರಕರಣವೆಂದು ತೀರ್ಮಾನಿಸಿದ ಪ್ರಕರಣಗಳು | ಪರಿಹಾರ ವಿತರಿಸಿರುವ ಅರ್ಹ ಪ್ರಕರಣಗಳು |
| 1 | ಬಾಗಲಕೋಟೆ | 36 | 3 | 33 | 33 | 25 | 4 | 21 | 21 |
| 2 | ಬಳ್ಳಾರಿ | 18 | 2 | 16 | 16 | 24 | 5 | 19 | 19 |
| 3 | ಬೆಂ. ಗ್ರಾಮಾಂತರ | 5 | 3 | 2 | 2 | 4 | 1 | 3 | 3 |
| 4 | ಬೆಂ. ನಗರ | 2 | 0 | 2 | 2 | 0 | 0 | 0 | 0 |
| 5 | ಬೆಳಗಾವಿ | 96 | 16 | 80 | 80 | 105 | 13 | 92 | 92 |
| 6 | ಬೀದರ್ | 82 | 14 | 68 | 68 | 57 | 13 | 44 | 44 |
| 7 | ಚಾಮರಾಜನಗರ | 6 | 1 | 5 | 5 | 4 | 0 | 4 | 4 |
| 8 | ಚಿಕ್ಕಬಳ್ಳಾಪುರ | 6 | 0 | 6 | 6 | 5 | 0 | 5 | 5 |
| 9 | ಚಿಕ್ಕಮಗಳೂರು | 92 | 30 | 62 | 62 | 43 | 8 | 35 | 35 |
| 10 | ಚಿತ್ರದುರ್ಗ | 42 | 7 | 35 | 35 | 33 | 9 | 24 | 24 |
| 11 | ದಕ್ಷಿಣ ಕನ್ನಡ | 1 | 0 | 1 | 1 | 5 | 2 | 3 | 3 |
| 12 | ದಾವಣಗೆರೆ | 76 | 15 | 61 | 61 | 53 | 15 | 38 | 38 |
| 13 | ಧಾರವಾಡ | 67 | 11 | 56 | 56 | 47 | 12 | 35 | 35 |
| 14 | ಗದಗ | 34 | 10 | 24 | 24 | 25 | 8 | 17 | 17 |
| 15 | ಹಾಸನ | 94 | 19 | 75 | 75 | 44 | 21 | 23 | 23 |
| 16 | ಹಾವೇರಿ | 75 | 10 | 65 | 65 | 80 | 7 | 73 | 73 |
| 17 | ಕಲಬುರಗಿ | 60 | 7 | 53 | 53 | 76 | 9 | 67 | 67 |
| 18 | ಕೊಡಗು | 9 | 3 | 6 | 6 | 12 | 2 | 10 | 10 |
| 19 | ಕೋಲಾರ | 7 | 0 | 7 | 7 | 6 | 1 | 5 | 5 |
| 20 | ಕೊಪ್ಪಳ | 36 | 7 | 29 | 29 | 29 | 4 | 25 | 25 |
| 21 | ಮಂಡ್ಯ | 108 | 25 | 83 | 83 | 74 | 12 | 62 | 62 |
| 22 | ಮೈಸೂರು | 130 | 48 | 82 | 82 | 81 | 17 | 64 | 64 |
| 23 | ರಾಯಚೂರು | 30 | 6 | 24 | 24 | 43 | 13 | 30 | 30 |
| 24 | ರಾಮನಗರ | 15 | 4 | 11 | 11 | 15 | 4 | 11 | 11 |
| 25 | ಶಿವಮೊಗ್ಗ | 53 | 8 | 45 | 45 | 41 | 8 | 33 | 33 |
| 26 | ತುಮಕೂರು | 49 | 11 | 38 | 38 | 44 | 8 | 36 | 36 |
| 27 | ಉಡುಪಿ | 3 | 0 | 3 | 3 | 1 | 0 | 1 | 1 |
| 28 | ಉ.ಕನ್ನಡ | 7 | 2 | 5 | 5 | 8 | 4 | 4 | 4 |
| 29 | ವಿಜಯಪುರ | 27 | 6 | 21 | 21 | 38 | 2 | 36 | 36 |
| 30 | ಯಾದಗಿರಿ | 54 | 4 | 50 | 50 | 54 | 12 | 42 | 42 |
| | ಒಟ್ಟು | **1320** | **272** | **1048** | **1048** | **1076** | **214** | **862** | **862** |

# LCQ:359

## 2019–2020 ಸಾಲಿನ ರೈತರ ಆತ್ಮಹತ್ಯೆ ವರದಿ

### ಅನುಬಂಧ

| ಕ್ರ.ಸಂ. | ಜಿಲ್ಲೆಗಳು | ವರದಿಯಾದ ಪ್ರಕರಣಗಳು | ತಿರಸ್ಕೃತ ಪ್ರಕರಣಗಳು | ಅರ್ಹ ಪ್ರಕರಣಗಳು | ಪರಿಹಾರ ಧನ ವಿತರಿಸಿರುವುದು | ಪರಿಹಾರ ಧನ ವಿತರಿಸಲ ಬಾಕಿ | ತೀರ್ಮಾನಿಸಲು ಬಾಕಿ ಇರುವ ಪ್ರಕರಣಗಳು | ಎಫ್.ಎಸ್.ಎಲ್ ವರದಿಗಾಗಿ | ಇತರೆ ದಾಖಲಾತಿಗಾಗಿ |
|---|---|---|---|---|---|---|---|---|---|
| 1 | ಬಾಗಲಕೋಟೆ | 30 | 2 | 26 | 26 | 0 | 2 | 0 | 2 |
| 2 | ಬಳ್ಳಾರಿ | 38 | 1 | 32 | 31 | 1 | 5 | 3 | 2 |
| 3 | ಬೆಂಗಳೂರು (ಗ್ರಾ) | 1 | 0 | 1 | 1 | 0 | 0 | 0 | 0 |
| 4 | ಬೆಂಗಳೂರು (ನ) | 1 | 0 | 1 | 1 | 0 | 0 | 0 | 0 |
| | ಬೆಳಗಾವಿ | 81 | 12 | 55 | 50 | 5 | 14 | 8 | 6 |
| 6 | ಬೀದರ್ | 62 | 16 | 46 | 46 | 0 | 0 | 0 | 0 |
| 7 | ಚಾಮರಾಜನಗರ | 2 | 0 | 2 | 1 | 1 | 0 | 0 | 0 |
| 8 | ಚಿಕ್ಕಬಳ್ಳಾಪುರ | 3 | 0 | 3 | 1 | 2 | 0 | 0 | 0 |
| 9 | ಚಿಕ್ಕಮಗಳೂರು | 63 | 6 | 55 | 50 | 5 | 2 | 2 | 0 |
| 10 | ಚಿತ್ರದುರ್ಗ | 44 | 10 | 34 | 34 | 0 | 0 | 0 | 0 |
| 11 | ದಕ್ಷಿಣಕನ್ನಡ | 2 | 0 | 2 | 2 | 0 | 0 | 0 | 0 |
| 12 | ದಾವಣಗೆರೆ | 39 | 15 | 24 | 15 | 9 | 0 | 0 | 0 |
| 13 | ಧಾರವಾಡ | 78 | 25 | 53 | 28 | 25 | 0 | 0 | 0 |
| 14 | ಗದಗ | 37 | 14 | 23 | 11 | 12 | 0 | 0 | 0 |
| 15 | ಹಾಸನ | 35 | 4 | 31 | 31 | 0 | 0 | 0 | 0 |
| 16 | ಹಾವೇರಿ | 99 | 16 | 77 | 59 | 18 | 6 | 0 | 6 |
| 13 | ಕಲಬುರಗಿ | 79 | 0 | 68 | 68 | 0 | 11 | 0 | 11 |
| 18 | ಕೊಡಗು | 9 | 0 | 9 | 3 | 6 | 0 | 0 | 0 |
| 19 | ಕೋಲಾರ | 4 | 0 | 4 | 2 | 2 | 0 | 0 | 0 |
| 20 | ಕೊಪ್ಪಳ | 23 | 7 | 16 | 16 | 0 | 0 | 0 | 0 |
| 21 | ಮಂಡ್ಯ | 57 | 7 | 50 | 50 | 0 | 0 | 0 | 0 |
| 22 | ಮೈಸೂರು | 68 | 14 | 48 | 28 | 20 | 6 | 0 | 6 |
| 23 | ರಾಯಚೂರು | 21 | 11 | 10 | 10 | 0 | 0 | 0 | 0 |
| 24 | ರಾಮನಗರ | 7 | 1 | 6 | 5 | 1 | 0 | 0 | 0 |
| 25 | ಶಿವಮೊಗ್ಗ | 45 | 7 | 37 | 34 | 3 | 1 | 0 | 1 |
| 26 | ತುಮಕೂರು | 33 | 7 | 25 | 24 | 1 | 1 | 0 | 1 |
| 27 | ಉಡುಪಿ | 1 | 0 | 1 | 0 | 1 | 0 | 0 | 0 |
| 28 | ಉತ್ತರಕನ್ನಡ | 8 | 0 | 7 | 6 | 1 | 1 | 0 | 1 |
| 29 | ವಿಜಯಪುರ | 53 | 2 | 49 | 49 | 0 | 2 | 0 | 2 |
| 30 | ಯಾದಗಿರಿ | 41 | 8 | 24 | 17 | 7 | 9 | 0 | 9 |
| | ಒಟ್ಟು | **1064** | **185** | **819** | **699** | **120** | **60** | **13** | **47** |